ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 21/5/2020

# ಕೋಟಿ ಜನರನ್ನು ತಲುಪಿದ ಆಯುಷ್ಮಾನ್ ಭಾರತ್

ಉ.ವಾ 21/5/20



ನವದೆಹಲಿ: ಆಯುಷ್ಮಾನ್ ಭಾರತ್ ಆರೋಗ್ಯ ವಿಮಾ ಯೋಜನೆಯಿಂದ 1 ಕೋಟಿಗೂ ಅಧಿಕ ಮಂದಿ ಉಚಿತ ಚಿಕಿತ್ಸೆ ಪಡೆದಿದ್ದಾರೆ. ಇದು ಪ್ರತಿ ಭಾರತೀಯನಿಗೂ ಹೆಮ್ಮೆಯ ಸಂಗತಿ. ಕೇವಲ ಎರಡೇ ವರ್ಷಗಳಲ್ಲಿ ಜಗತ್ತಿನ ಅತಿದೊಡ್ಡ ಆರೋಗ್ಯ ಸೇವೆಯ ಸಾಲಿಗೆ ಆಯುಷ್ಮಾನ್ ಸೇರಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.



ಮೇಘಾಲಯದ ಯೋಧನ ಪತ್ನಿ ಪೂಜಾ ಥಾಪಾ, ಒಂದು ಕೋಟಿಯ ಫಲಾನುಭವಿ ಆದ ಹಿನ್ನೆಲೆಯಲ್ಲಿ ಬುಧವಾರ ಆಕೆಯೊಂದಿಗೆ ಪ್ರಧಾನಿ ಸಂವಾದ ನಡೆಸಿದರು. 'ಆಯುಷ್ಮಾನ್ ಮೂಲಕ ಬಡವರಿಗೆ, ಕೆಳಹಂತದ ಜನರಿಗೆ ಸರ್ಕಾರದ ಮೇಲೆ ನಂಬಿಕೆ ಹೆಚ್ಚಾಗಿದೆ' ಎಂದು ಹೇಳಿದರು.

**ಕೊರೊನಾಗೂ ಚಿಕಿತ್ಸೆ:** ಆಯುಷ್ಮಾನ್ ವಿಮೆಯಡಿ, 53 ಕೋಟಿ ಮಂದಿ ಕೊರೊನಾ ಸೋಂಕಿನ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಪ್ರಸ್ತುತ 2131 ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. 21,565 ಆಸ್ಪತ್ರೆಗಳಲ್ಲಿ ಈ ಯೋಜನೆಯ ಪ್ರಯೋಜನ ಲಭ್ಯವಿದೆ. ದೇಶಾದ್ಯಂತದ ಆಸ್ಪತ್ರೆಗಳಲ್ಲಿ ಸುಮಾರು 13,412 ಕೋಟಿ ರೂ.ಗಳ ಚಿಕಿತ್ಸೆಯನ್ನು ಕೇಂದ್ರ ಸರ್ಕಾರ ಉಚಿತವಾಗಿ ನೀಡಿದೆ ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ತಿಳಿಸಿದೆ.

**ಟಾಪ್ ರಾಜ್ಯಗಳು:** ಗುಜರಾತ್, ತಮಿಳುನಾಡು, ಛತ್ತೀಸಗಢ, ಕೇರಳ ಹಾಗೂ ರಾಜಸ್ಥಾನ ರಾಜ್ಯಗಳು ಈ ವಿಮೆಯಿಂದ ಅತಿಹೆಚ್ಚು ಪ್ರಯೋಜನ ಪಡೆದುಕೊಂಡಿವೆ.

**ಚಿಕಿತ್ಸೆ ಏನೇನು?:** ಆರ್ಥೋಪೆಡಿಕ್ಸ್, ಕಾರ್ಡಿಯಾಲಜಿ, ಸಿಂಗಲ್ ಸ್ಟೆಂಟ್ ಅಳವಡಿಕೆ, ಸೊಂಟ್ಟ ಮುರಿತ, ಬೈಪಾಸ್ ಸರ್ಜರಿಗಳಿಗೆ ವಿಮೆ ಹೆಚ್ಚು ಬಳಕೆಯಾಗಿದೆ.